ವರದಿಯನ್ನು ಈಗ ಸಲ್ಲಿಸಿದ್ದು, ಸರ್ಕಾರವು ಆಯೋಗದ ಪ್ರಧಾನ ಶಿಫಾರಸುಗಳನ್ನು ಸಾಮಾನ್ಯವಾಗಿ ಒಪ್ಪಿಕೊಂಡಿದೆ ಮತ್ತು ಆಜ್ಞೆಗಳನ್ನು ಈ ವರ್ಷದ ಜನವರಿ ಒಂದನೇ ದಿನಾಂಕದಿಂದ ಜಾರಿಗೆ ತರಲಿದೆ. ನಿರೀಕ್ಷಿಸಬಹುದಾದಂಥೆ ಇತರ ಉದ್ಯೋಗಿ ವೃಂದಗಳಿಗೆ ಸಂಬಂಧಿಸಿದಂತೆ ತಮ್ಮ ಸ್ಥಾನಕ್ಕೆ ಭಾಧಕ ವುಂಟಾಗಿದೆ ಎಂಬ ಕಾರಣಕ್ಕಾಗಿ ಕೆಲವು ಉದ್ಯೋಗಿ ವೃಂದಗಳ ನೌಕರರು, ಆಯೋಗದ ಶಿಫಾರಸು ಗಳಿಂದ ಅತೃಪ್ತರಾಗಿದ್ದಾರೆ. ಈ ಪಾಸವಿಗಳನ್ನು ಪರಿಶೀಲಿಸಲು ಸರ್ಕಾರವು ಒಂದು ಅಧಿಕಾರಿಗಳ ಸಮಿತಿಯನ್ನು ರಚಿಸುವುದು. ವೇತನ ಆಯೋಗದ ಶಿಫಾರಸುಗಳಿಂದಾಗಿ ರಾಜ್ಯ ಸರ್ಕಾರದ ಮೇಲೆ ಹಣಕಾಸಿನ ಸಂಬಂಧದಲ್ಲಿ ಹೆಚ್ಚಿನ ಹೊರೆಯುಂಟಾಗಿದ್ದರೂ ಆಯೋಗದ ಶಿಫಾರಸುಗಳನ್ನು ಒಪ್ಪಿ ಕೊಳ್ಳುವಲ್ಲಿ ಯಾವುದೇ ವಿಳಂಬ ಉಂಟಾಗಿಲ್ಲ. ಇದಕ್ಕೆ ಪ್ರತಿಯಾಗಿ ಸರ್ಕಾರೀ ನೌಕರರು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವರೆಂದೂ ಕರ್ನಾಟಕದ ಜನತೆಗೆ ಉತ್ತಮ ಸೇವೆ ನೀಡುವರೆಂದೂ ಸರ್ಕಾರ ನಿರೀಕ್ಷಿಸುತ್ತದೆ.

15. ಮಾನ್ಯ ಸದಸ್ಯರೇ, ನಾನೀಗ ನನ್ನ ಭಾಷಣವನ್ನು ಮುಗಿಸಬಯಸುತ್ತೇನೆ. ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ಬಹಳಷ್ಟು ಕಾರ್ಯಕಲಾಪಗಳಿವೆ. ಬಜೆಟ್‌ಗೆ ಒಪ್ಪಿಗೆ ನೀಡು ವುದಲ್ಲದೆ ಅನೇಕ ವಿಧಾಯಿ ವಿಷಯಗಳನ್ನು ನೀವು ಪರಿಶೀಲಿಸಲಿದ್ದೀರಿ. ನಿಮ್ಮ ಚರ್ಚೆಗಳನ್ನು ಚಾಗರೂಕತೆಯಿಂದ ಮತ್ತು ತ್ವರಿತವಾಗಿ ನಿರ್ವಹಿಸುವಿರೆಂಬ ಭರವಸೆ ನನಗಿದೆ.

16. ಮುಂಬರುವ ಅಧಿವೇಶನದಲ್ಲಿ ನಿಮಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ನಾನು ಆಶಿಸುತ್ತೇನೆ.

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಅಪರಾಹ್ನ ೧೨-೦೦ ಗಂಟೆಗೆ ಪುನಃ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ ಬಣಕಾರ್) ಪೀಠವನ್ನಲಂಕರಿಸಿದರು.

ಅಧ್ಯಕ್ಷರು.—ಈಗ ಕಾರ್ಯದರ್ಶಿಯವರು ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿ.—ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿ ಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

## ಪ್ರಕಟಣೆಗಳು

### ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ವಿರೋಧಪಕ್ಷದ ನಾಯಕಿಯಾಗಿ ಆರಿಸಿರುವುದರ ಬಗ್ಗೆ

ಅಧ್ಯಕ್ಷರು.—ಶ್ರೀಮತಿ ಕೆ. ಎಸ್ ನಾಗರತ್ನಮ್ಮ ಅವರು ಕರ್ನಾಟಕ ಶಾಸಕಾಂಗದ ಕಾಂಗ್ರೆಸ್ (ಐ) ಪಕ್ಷದ ನಾಯಕರಾಗಿ ಚುನಾಯಿಸಲ್ಪಟ್ಟಿದ್ದಾರೆಂದು ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ಪತಿಯಿಂದ ಪತ್ರ ಬಂದಿದೆ. ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷವು ೬೬ ಮಂದಿ ಸದಸ್ಯರ ಸಖ್ಯ ಬಲವನ್ನು ಹೊಂದಿದೆ. ಆದುದರಿಂದ ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷವನ್ನು ವಿರೋಧ ಪಕ್ಷವೆಂದು ಹಾಗೂ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರನ್ನು ವಿರೋಧ ಪಕ್ಷದ ನಾಯಕಿಯರೆಂದು ನಾನು ಮನ್ನಣೆ ನೀಡಿದ್ದೇನೆ. ಅವರಿಗೆ ಸದನದ ಪರವಾಗಿ ಅಭಿನಂದನೆಗಳು.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ಇಲ್ಲಿ ತಾವು ಘೋಷಿಸಿದ್ದೀರಿ. ಬಹುಶಃ ಶ್ರೀಮತಿ ನಾಗರತ್ನಮ್ಮನವರು ಈ ಒಂದು ಸ್ಥಾನಕ್ಕೆ ಎಂದೋ ಅರ್ಹರಾಗಿರಬೇಕಾಗಿತ್ತು. ಅವರು ಈ ಸಭೆಯ ಅಧ್ಯಕ್ಷರಾಗಿ ಬಹಳ ವರ್ಷಗಳಕಾಲ ಇದ್ದರು. ಅವರು ಇಲ್ಲಿ ಪ್ರಥಮ ಅಧ್ಯಕ್ಷಣಿ ಯಾಗಿ ಅತ್ಯಂತ ಯಶಸ್ವಿಯಾಗಿ ಈ ಸಭೆಯನ್ನು ನಡಿಸಿಕೊಂಡು ಹೋಗಿರತಕ್ಕಂಥ ಒಂದು ಕೀರ್ತಿ

ಯನ್ನು ಪಡೆದಿದ್ದಾರೆ. ಅಲ್ಲದೆ ಪ್ರಥಮ ವಿರೋಧಪಕ್ಷದ ನಾಯಕಿಯಾಗಿ ಇವೊತ್ತು ಆಯ್ಕೆಯಾಗಿರ ತಕ್ಕಂಥಾದ್ದು ನಮ್ಮ ಈ ಕಡೆಯವರಿಗೆ ಮತ್ತು ಆ ಕಡೆಯವರಿಗೆ ಅತ್ಯಂತ ಹರ್ಷವನ್ನು ತಂದು ಕೊಟ್ಟಿದೆ. ಈ ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ ಈ ಕಾರ್ಯವನ್ನು ಅತ್ಯಂತ ಜವಾಬ್ದಾರಿ ಯಿಂದ ನಡೆಸಿ ಕೊಂಡು ಹೋಗತಕ್ಕಂಥ ಶಕ್ತಿಯನ್ನು ಶ್ರೀಮತಿ ನಾಗರತ್ನಮ್ಮನವರಿಗೆ ದೇವರು ಕೊಡಲಿ ಎಂದು ಹೇಳುತ್ತಿದ್ದೇನೆ. ಅವರಿಗೆ ಸರ್ಕಾರದ ವತಿಯಿಂದ ನನ್ನ ಸಂಪೂರ್ಣವಾದ ಅಭಿನಂದನೆ ಗಳನ್ನು ಸಲ್ಲಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಮಾನ್ಯ ವಿರೋಧಪಕ್ಷದ ನಾಯಕಿಯವರು).—ಮಾನ್ಯ ಅಧ್ಯಕ್ಷರೇ ಸರ್ಕಾರದ ಪರವಾಗಿ ನಮ್ಮ ಗೃಹ ಮಂತ್ರಿಗಳು ನಾನು ಈ ಸ್ಥಾನಕ್ಕೆ ಆಯ್ಕೆಯಾಗಿರುವು ದಕ್ಕಾಗಿ ಅವರ ಶುಭಾಶಯಗಳನ್ನು ನನಗೆ ಹೇಳಿದ್ದಾರೆ. ಈ ಸಭೆಯು ವಿರೋಧಪಕ್ಷದ ನಾಯಕಿಯಾಗಿ ಚುನಾಯಿತಳಾಗಿ ವಿರೋಧಪಕ್ಷದಿಂದ ಸರ್ಕಾರದವರು ಏನು ಮಾಡಿದರೂ ಅದನ್ನು ವಿರೋಧ ವಹಾಡುವುದೇ ನಮ್ಮ ಅಭ್ಯಾಸ, ವಿರೋಧಮಾಡುವುದಕ್ಕೇ ನಾವು ಇದ್ದೇವೆ ಎನ್ನುವ ಅಭಿಪ್ರಾಯ ಹೊಂದಿರುವವಳು ನಾನಲ್ಲ. ಸರ್ಕಾರದವರು ಒಳ್ಳೆಯ ಕೆಲಸ ಮಾಡಿದರೆ ಅದನ್ನು ಸ್ವಾಗತಿಸಿ, ಸರ್ಕಾರದವರು ತರತಕ್ಕಂಥ ಉತ್ತಮ ಕಾನೂನು ಕಟ್ಟಳೆಗಳನ್ನು ಸ್ವಾಗತಿಸಿ, ಅವರು ಎಲ್ಲಾದರೂ ಹಳಿತಪ್ಪಿ, ದಾರಿತಪ್ಪಿ ನಡೆದರೆ ಅದನ್ನು ತಿದ್ದುವುದಕ್ಕೆ ನಾವು ವಿರೋಧ ವ್ಯಕ್ತಪಡಿಸಿ ಅವರನ್ನು ತಿದ್ದುವುದಕ್ಕೆ ಪ್ರಯತ್ನ ಪಡುವುದು ವಿರೋಧ ಪಕ್ಷದ ಹೊಣೆ ಮತ್ತು ನಾಯಕರ ಜವಾಬ್ದಾರಿ ಎಂದು ತಿಳಿದುಕೊಂಡಿರುವವಳು ನಾನು, ಆದೇರೀತಿ ನಾನು ನಡೆಯುತ್ತೇನೆ ಎಂದು ನಮ್ಮ ನಾಯಕರಿಗೆ ಭರವಸೆ ಕೊಡುತ್ತೇನೆ. ಅವರ ಜೊತೆಗೆ ನಮ್ಮ ಪಕ್ಷವನ್ನು ನನ್ನ ಜೊತೆಯಲ್ಲಿ ಎಲ್ಲಾ ವಿಧದಲ್ಲೂ ತೆಗೆದುಕೊಂಡು ಹೋಗಿ ಆದಷ್ಟು ಮಟ್ಟಿಗೆ ಸರ್ಕಾರದ ಕೆಲಸ ನ್ಯಾಯವಾದ ರೀತಿಯಲ್ಲಿ ನಡೆಯುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ತಮ್ಮ ಮೂಲಕ ಅವರಿಗೆ ಭರವಸೆ ಕೊಡುತ್ತೇನೆ ಎಂದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಕ್ಷಮೆಯನ್ನು ಮತ್ತು ಮಾನ್ಯ ಸದಸ್ಯರ ಕ್ಷಮೆಯನ್ನು ಕೇಳುತ್ತೇನೆ. ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಇದ್ದುದರಿಂದ ಬರುವುದಕ್ಕೆ ಏರಡು ನಿಮಿಷತಡವಾಯಿತು. ಮೊಟ್ಟಮೊದಲಿಗೆ ವಿರೋಧ ಪಕ್ಷದ ಹೊಸ ನಾಯಕರನ್ನು ಅಭಿನಂದಿಸತಕ್ಕ ಗೌರವ ನನಗೆ ಇರಬೇಕಾಗಿತ್ತು, ಅದಕ್ಕೆ ತಪ್ಪಿಸಿಕೊಂಡೆ. ಅದಕ್ಕಾಗಿ ವಿಷಾದ. ಶ್ರೀಮತಿ ನಾಗರತ್ನಮ್ಮನವರ ಬಗ್ಗೆ ನನಗೆ ವೈಯಕ್ತಿಕವಾಗಿ ಎಷ್ಟು ಗೌರವ ಇದೆಯೋ (ನನಗೆ ನೂರಕ್ಕೆ ನೂರರಷ್ಟು ವಿಶ್ವಾಸ ಇದೆ) ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ಅಷ್ಟೇ ಗೌರವ ಇದೆ. ಅವರಿಗೆ ಅಪಾರವಾದ ಅನುಭವವಿದೆ. ಈ ಮನೆಯ ಸದಸ್ಯರಾಗಿ ಅನೇಕ ವರ್ಷಗಳ ವರೆಗೆ ಸಕ್ರೀಯ ಸದಸ್ಯರಾಗಿ, ಆಮೇಲೆ ಈ ಮನೆಯ ಅಧ್ಯಕ್ಷರಾಗಿ ಯಶಸ್ವಿಯಾಗಿ ಒಂದು ಮಾದರಿಯ ರೀತಿಯಲ್ಲಿ ತಮ್ಮ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಒಂದು ಉನ್ನತ ಮತ್ತು ಅತ್ಯಂತ ದಾನಿಗಳ ಕುಟುಂಬಕ್ಕೆ ಸೇರಿದಂತಹ ಆದರ್ಶಪ್ರಾಯವಾದಂತಹ ವ್ಯಕ್ತಿ ಅವರು. ಈಗಾಗಲೇ ಅವರು ವ್ಯಕ್ತ ಮಾಡಿದಂತಹ ವಿಚಾರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ವಿರೋಧಪಕ್ಷ ಮುಖ್ಯವಾಗಿ ಜವಾಬ್ದಾರಿ ಸರ್ಕಾರ ತಪ್ಪು ಮಾಡಿದಾಗ, ಸರ್ಕಾರದ ಕೆಲಸಗಳಲ್ಲಿ ನೂನ್ಯತೆಗಳು ಕಂಡು ಬಂದಾಗ, ಅದನ್ನು ಎತ್ತಿ ತೋರಿಸತಕ್ಕದ್ದು ವಿರೋಧ ಪಕ್ಷದ ಜವಾಬ್ದಾರಿ. ಅದಕ್ಕಾಗಿ ನಾವು ವಿರೋಧ ಪಕ್ಷಗಳಿಗೆ ಅಷ್ಟು ಗೌರವವನ್ನು ಪ್ರಜಾ ಪ್ರಭುತ್ವದಲ್ಲಿ ಕೊಡುತ್ತೇವೆ. ಸಭೆಯ ಕಾರ್ಯಕಲಾಪಗಳು ನಡೆಯುವಾಗ ಕೆಲವೊಂದುಸಲ ಚರ್ಚೆಯಲ್ಲಿ ಬೆಳಕಿಗಿಂತ ಬೆಂಕಿ ಹೆಚ್ಚು ಕಾಣುತ್ತದೆ. ನಮ್ಮ ಹೊಸ ವಿರೋಧಪಕ್ಷದ ನಾಯಕರ ನೇತೃತ್ವದಲ್ಲಿ ಚರ್ಚೆಯಲ್ಲಿ ಹೆಚ್ಚು ಬೆಳಕು ಕಾಣಲಿಯೆಂದು ನಾನು ಆಶಯ ಮಾಡುತ್ತೇನೆ. ಸದನದ ಗೌರವಕ್ಕೆ ನಮ್ಮ ವ್ಯವಹಾರದಲ್ಲಿ ಸಜ್ಜನಿಕೆಗೆ ಯಾವಾಗಲೂ ಕೊರತೆಯಾಗಬಾರದು. ಚರ್ಚೆ ಮೊದಲನೆಯದು ಆಗಬೇಕು ಎನ್ನುವುದು ನಮ್ಮೆಲ್ಲರಆಶಯ ಮತ್ತು ಹಂಬಲ.

ವಿರೋಧ ಪಕ್ಷದ ನಾಯಕರು ಒಬ್ಬ ಮಹಿಳೆ. ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ವಿರೋಧ ಪಕ್ಷದ ನಾಯಕರನ್ನಾಗಿ ಒಬ್ಬ ಮಹಿಳೆಯನ್ನು ಆಯ್ಕೆ ಮಾಡುವಂತಹ ನಿರ್ಣಯವನ್ನು ತೆಗೆದು ಕೊಂಡಂತಹ ವಿರೋಧಪಕ್ಷದ ಎಲ್ಲಾ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ವಿರೋಧ ಪಕ್ಷದ ನಾಯಕರು ಒಬ್ಬ ಮಹಿಳೆಯಾಗಿರುವುದರಿಂದ, ಒಬ್ಬ ಪುರುಷ ಇದ್ದಾಗ ಎಷ್ಟು ಸಂಕೋಚರಹಿತವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಿತ್ತೊ, ಈಗ ಅದು ಸಾಧ್ಯವಿಲ್ಲ. ಇವರು ಕೇವಲ ಮಹಿಳೆ ಅಷ್ಟೇ ಅಲ್ಲ, ಅವರ ವ್ಯಕ್ತಿತ್ವ ಕೂಡ ಅಷ್ಟೇ ಅವರ ಬುಯಿ, ನಾಲಿಗೆ ಅಷ್ಟೇ ಚುರುಕು ಅದರ ಅನುಭವ ನಮಗೆಲ್ಲ ಆಗಿದೆ.

ಅಷ್ಟು ಚುರುಕಾಗಿ, ತೀಕ್ಷ್ಣವಾಗಿ ಅವರು ಮಾತನಾಡುತ್ತಾರೆ. ಅವರ ಮಾತು ಅಷ್ಟೇ ಗಂಭೀರತೆ ಯಲ್ಲಿರುತ್ತದೆ, ಅಷ್ಟೇ ಸಜ್ಜನಿಕೆಯಲ್ಲಿರುತ್ತದೆ. ಈ ಒಂದು ನಿರ್ಣಯದಿಂದ ಈ ಸಭೆಯು ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಲಿ. ನಾವೆಲ್ಲರೂ ಒಂದೇ ನಾಣ್ಯದ ಎರಡು ಮುಖಗಳೆಂದು ಕೆಲಸ ಮಾಡೋಣ. ಜನತೆ ನಮಗೆ ಬೇರೆ ಬೇರೆ ಪಾತ್ರವನ್ನು ವಹಿಸಿದೆ. ಬೇರೆ ಯಾವ ರಾಜ್ಯದಲ್ಲಿಯೂ ಬಹುಶಃ ನಾಲ್ಕು ವರ್ಷಗಳಲ್ಲಿ ಐದು ಸಾರ್ವತ್ರಿಕ ಚುನಾವಣೆ ಆದಂಶಹ ಉದಾಹರಣೆಗಳು ಇಲ್ಲ. ೧೯೫೫ರಲ್ಲಿ ಈ ಮನೆಗೆ ಚುನಾವಣೆ ನಡೆಯಿತು. ೧೯೫೪ರಲ್ಲಿ ಲೋಕಸಭೆಗೆ ಚುನಾವಣೆ ನಡೆಯಿತು. ಆಮೇಲೆ ೧೯೫೫ರಲ್ಲಿ ಪುನಃ ಈ ಮನೆಗೆ ಚುನಾವಣೆ ನಡೆಯಿತು. ೧೯೮೬ರಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆದಿವೆ.

ಶ್ರೀ ಎನ್. ಎಂ. ಅಡ್ಯಂತಾಯ.—ಸರ್ಕಾರದ ಬೊಕ್ಕಸದ ಹಣವೆಲ್ಲಾ ಚುನಾವಣೆಗೆ ಖಾಲಿ ಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೇನೂ ಇಲ್ಲ. ಹೀಗೆ ಬರತಕ್ಕ ಕಾಲದಲ್ಲಿ ನಾವು ಕುಳಿತು ನಮ್ಮ ರಾಜ್ಯದ ಅಭಿವೃದ್ಧಿಯ ಕಡೆಗೆ ಲಕ್ಷ್ಯ ಹಾಕೋಣವೆಂದು ಹೇಳಿ ಹೃತ್ಪೂರ್ವಕವಾಗಿ ಪಕ್ಷದ ಪರವಿಯಿಂದ ಮತ್ತು, ಈ ಸಭೆಯ ವತಿಯಿಂದ ನಮ್ಮ ವಿರೋಧ ಪಕ್ಷದ ನಾಯಕರನ್ನು ಅಭಿನಂದಿಸುತ್ತೇನೆ.

## ಪ್ರಕಟಣೆ ೨

ಅಧ್ಯಕ್ಷರು.—ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮದ ಪ್ರಕಾರ ನಾನು ಈ ಕೆಳಕಂಡ ೬ ಜನ ಅಧ್ಯಕ್ಷತೆ ವಹಿಸುವ ಸದಸ್ಯರುಗಳ ಪಟ್ಟಿಯಲ್ಲಿ ಸೇರಿಸಿ ಅವರನ್ನು ನಾಮನಿರ್ದೇಶನ ಮಾಡಿರುತ್ತೇನೆ.

ಶ್ರೀಯುತರುಗಳಾದ:—

೧. ಎಂ. ಪಿ. ಪ್ರಕಾಶ್
೨. ವೈ. ಕೆ. ರಾಮಯ್ಯ
೩. ಡಾ॥ ಎ. ಪುಷ್ಪಾವತಿ
೪. ಮಹಮದ್ ಲೈಕುದ್ದೀನ್
೫. ಚಂದ್ರಕಾಂತ ಜಿ. ಬಿಲ್ಲವ್
೬. ಶ್ರೀಮತಿ ಮನೋರಮ ಮಧ್ವರಾಜ್

## ಸಂತಾಪ ಸೂಚನೆಗಳು

ಅಧ್ಯಕ್ಷರು.—ಈಗ ಸಂತಾಪ ಸೂಚನೆಗಳು. ಈ ಕೆಳಕಂಡ ವ್ಯಕ್ತಿಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧. ಮಾಜಿ ಶಾಸಕರಾದ ಶ್ರೀ ಪಯಾನಂದ ಕಲ್ಲೆ ಇವರು ದಿನಾಂಕ ೮-೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೬೨ ರಿಂದ ೧೯೭೧ ರವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದರು.

೨. ಮಾಜಿ ಶಾಸಕರಾದ ಶ್ರೀ ಜೆ. ಎಂ. ಮಂಜುನಾಥಯ್ಯ ಇವರು ದಿನಾಂಕ ೧೦-೧೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೫೬ ರಿಂದ ೧೯೫೭ರ ವರೆಗೆ ಮತ್ತು ೧೯೭೧ರ ವರೆಗೆ ವಿಧಾನಸಭಾ ಸದಸ್ಯರಾಗಿದ್ದರು.

೩. ಮಾಜಿ ಶಾಸಕರಾದ ಶ್ರೀ ದೇವೇಂದ್ರಪ್ಪ ಘಾಳಪ್ಪ ಇವರು ದಿನಾಂಕ ೧೪-೧೨-೧೯೮೬ ರಂದು ನಿಧನರಾದರು. ಶ್ರೀಯುತರು ೧೯೭೨ರಿಂದ ೧೯೮೪ರ ವರೆಗೆ ಸತತವಾಗಿ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ೧೯೭೨ರಲ್ಲಿ ಯೋಜನಾ ಮತ್ತು ವಾರ್ತಾ ರಾಜ್ಯ ಮಂತ್ರಿಗಳಾಗಿ, ೧೯೭೩ರಲ್ಲಿ ಆರೋಗ್ಯ ರಾಜ್ಯ ಮಂತ್ರಿಗಳಾಗಿ, ೧೯೭೪ರಲ್ಲಿ ಪಶುಸಂಗೋಪನಾ ರಾಜ್ಯ ಮಂತ್ರಿಗಳಾಗಿ, ೧೯೭೬ರಲ್ಲಿ ಭೂ ಸುಧಾರಣಾ ಮತ್ತು ಮಿನುಗಾರಿಕಾ ಮತ್ತು ಡೈರಿ ಅಭಿವೃದ್ಧಿಯ ರಾಜ್ಯ ಮಂತ್ರಿಗಳಾಗಿದ್ದರು. ೧೯೭೯ರಲ್ಲಿ ಲೋಕೋಪಯೋಗಿ ಮಂತ್ರಿಗಳಾಗಿದ್ದರು. ಹೀಗೆ ಮಾನ್ಯರು ಹಲವಾರು ಖಾತೆಗಳಲ್ಲಿ ಮಂತ್ರಿಗಳಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.